Sanjevani - 21/03/19
page - No - 08

# ರಾಷ್ಟ್ರ ಸಾಹಿತಿಗಳ ಸಂಗಮ

ಬೆಂಗಳೂರು, ಮಾ.21– ಸಾರಸ್ವತ ಲೋಕದ ಅತಿರಥ, ಮಹಾರಥರು ಅಲ್ಲಿ ಸೇರಿದ್ದರು. ನಾಡಿನ ಸಾಹಿತಿಗಳ ಸಮಾಗಮ ನೋಡುಗರ ಕಣ್ಣನ ತಣ್ಣಿಸಿತ್ತು, ದೇಶದ ಹಲವು ಭಾಷೆಗಳ ಸಾಹಿತಿಗಳನ್ನು ಕಣ್ತುಂಬಿಕೊಳ್ಳುವ ಅಪರೂಪದ ಸಮಾರಂಭವಾಗಿತ್ತು. ಕಾರ್ಯಕ್ರಮದ ಹೆಸರೆ ಹೇಳುವಂತೆ ಅದು ಕಾವ್ಯೋತ್ಸವ ಅಲ್ಲಿ ಸಾಹಿತಿಗಳಿಗೆ ಕೊರತೆಯೇ ಇರಲಿಲ್ಲ.

ಇದು ವಿಶ್ವ ಕಾವ್ಯದಿನವೂ ಅಥವಾ ರಾಷ್ಟ್ರಮಟ್ಟದ ಸಾಹಿತಿಗಳ ಸಮ್ಮೇಳನವೂ ಎಂದು ಅಚ್ಚರಿಪಡುವಷ್ಟು ಸಂಖ್ಯೆಯಲ್ಲಿ ಹತ್ತಾರು ಭಾಷೆಯ ಹಿರಿಯ ಸಾಹಿತಿಗಳು ಒಂದೇ ಕಡೆ ಜಮಾಯಿಸಿ, ಹಬ್ಬದಂತಹ ವಾತಾವರಣ ಸೃಷ್ಟಿಸಿದರು.

ಇದು ಕಂಡಿದ್ದು, ನಗರದ ಸೆಂಟ್ರಲ್ ಕಾಲೇಜಿನ ಕೆನರಾ ಬ್ಯಾಂಕ್ ಸ್ಕೂಲ್ ಆಫ್ ಮ್ಯಾನೇಜ್ಮೆಂಟ್ ಸ್ಟಡೀಸ್ ಸಭಾಂಗಣದಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಏರ್ಪಡಿಸಿದ್ದ, ವಿಶ್ವ ಕಾವ್ಯ ದಿನದ ಅಂಗವಾಗಿ 'ಪಥ್ವಿ: ಕಾವ್ಯೋತ್ಸವ' ಕಾರ್ಯಕ್ರಮದಲ್ಲಿ.

ಈ ಬಾರಿಯ ಕಾವ್ಯೋತ್ಸವದಲ್ಲಿ ಗುಜರಾತಿ, ನೇಪಾಳಿ, ಹಿಂದಿ, ಮರಾಠಿ, ಪಂಜಾಬಿ, ಉರ್ದು, ತೆಲುಗು, ಇಂಗ್ಲೀಷ್, ರಾಜಸ್ತಾನಿ, ಸಿಂಧಿ, ಬೋಡೋ, ಕಾಶ್ಮೀರಿ, ಮೈಥಿಲಿ, ಒಡಿಯಾ, ಸಂಸ್ಕೃತ, ಸಂತಾಲಿ ಹೀಗೆ, ದೇಶದಲ್ಲಿ ನೆಲೆಸಿರುವ ಅನೇಕ ಭಾಷೆಗಳ ಸಾಹಿತಿಗಳು ಪಾಲ್ಗೊಂಡಿದ್ದು, ವಿಶೇಷವಾಗಿತ್ತು.

ಕಾವ್ಯೋತ್ಸವ ಉದ್ಘಾಟಿಸಿ ಮಾತನಾಡಿದ, ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚಂದ್ರಶೇಖರ ಕಂಬಾರ, ಭಾರತೀಯ ಭಾಷೆಗಳಲ್ಲಿ ಬಹುಪಾಲು ಸಾಹಿತ್ಯ ರಚನೆಯಾಗಬೇಕು. ಆದರೆ, ಪಾಶ್ಚಿಮಾತ್ಯದ ಚಿಂತನೆಯಲ್ಲಿ ಮುಳುಗುವುದು ಸರಿಯಲ್ಲ. ನೆಲ ಸಂವೇದನೆ ಕಾಪಾಡಿಕೊಂಡು ಪಾಶ್ಚಿಮಾತ್ಯಕ್ಕೆ ಪರ್ಯಾಯ ಸಾಹಿತ್ಯ ರಚಿಸುವಲ್ಲಿ ಯಶಸ್ವಿ ಕಾಣಬೇಕು ಎಂದು ಅಭಿಪ್ರಾಯಪಟ್ಟರು.

ಗುಜರಾತಿಯ ಹಿರಿಯ ಕವಿ ಸೀತಾಂಶು ಯಶಸ್ಚಂದ್ರ ಮಾತನಾಡಿ, ಭೂಮಿ ಒಂದು ಭೋಗದ ವಸ್ತುವಲ್ಲ. ಅದಕ್ಕೆ ತನ್ನದೇ ಆದ ಅಸ್ತಿತ್ವವಿದೆ. ತಾಯಿ ಮತ್ತು ಮಾತ ಭೂಮಿ ಸ್ವರ್ಗಕ್ಕೆ ಸಮಾನವಾದದ್ದು ಎಂದು ಪ್ರತಿಪಾದಿಸಿದರು.

ರಾಜರ ಆಳ್ವಿಕೆಯಲ್ಲಿ ಭೂಮಿಯನ್ನು ಒಂದು ಭೋಗದ ವಸ್ತುವಿನ ರೀತಿಯಲ್ಲಿ ನೋಡಲಾಗುತ್ತಿತ್ತು. ಭೂಪತಿ, ಭೂಮಿಯ ಒಡೆಯ ಎಂದು ಅಹಂಕಾರದಿಂದ ಜಂಭಪಟ್ಟುಕೊಳ್ಳುತ್ತಿದ್ದ ರಾಜರನ್ನು ವಿಮರ್ಶಕರು ತಾಯಿಗಂಡರು ಎಂಬ ಕಾರವಾದ ಪದ ಬಳಕೆಯಿಂದ ಕರೆದಿದ್ದಾರೆ ಎಂದು ನುಡಿದರು.

ರಾಜರ ಪ್ರಭುತ್ವ ಕೊನೆಗೊಳ್ಳುತ್ತಿದ್ದಂತೆ ಭೂಮಿ ಎಂಬ ಪದಕ್ಕೆ ವಿಶಾಲವಾದ ಅರ್ಥ ಬಂದಿತು. ರೈತನನ್ನು ಭೂಮಿ ತಾಯಿಯ ಚೊಚ್ಚಲ ಮಗ, ಮಣ್ಣಿನ ಮಗ ಎಂದೆಲ್ಲ ಕರೆಯಲಾಯಿತು. ಭೂಮಿಯನ್ನು ಪೂಜನೀಯ ಭಾವನೆಯಿಂದ ಕಾಣಲಾಯಿತು. ಜನಪದ ಸಾಹಿತ್ಯದಲ್ಲೂ ಭೂಮಿ ತಾಯಿಯೇ ಮೂಲ ದೇವತೆ ಎಂದು ಹೇಳಿದರು.

ತಾಯಿ ಎಂದರೆ ಮಹತ್ವವಾದ ಸಂಬಂಧ, ಅಮ್ಮ ಎನ್ನುವ ಪದಕ್ಕೆ ಎಲ್ಲಾ ಭಾಷಾ ಸಾಹಿತ್ಯದಲ್ಲೂ ಗಂಭೀರವಾದ ಚಿಂತನೆ ನಡೆಸಲಾಗಿದೆ. ಹಲವು ಕಾವ್ಯಗಳಲ್ಲಿ ತಾಯಿಯನ್ನು ಕಂಡುಕೊಂಡಿದ್ದಾರೆ, ಮೊದಲನೆಯವರಾಗಿ ಭೂಮಿ ತಾಯಿ, ವಿಶ್ವಮಾತೆ, ಭಾರತ ಮಾತೆ, ಮಾತಭಾಷೆ ಹಾಗೂ ಜನ್ಮ ನೀಡಿದ ತಾಯಿ ಎಂಬ ವಿಶಾಲವಾದ ಅರ್ಥ ನೀಡಿದ್ದರೆ ಎಂದು ಅಭಿಪ್ರಾಯಿಸಿದರು.

ಕಾವ್ಯೋತ್ಸವದಲ್ಲಿ ಸಾಹಿತ್ಯ ಅಕಾಡೆಮಿ ಕಾರ್ಯದರ್ಶಿ ಕೆ.ಶ್ರೀನಿವಾಸರಾವ್, ಪ್ರಾದೇಶಿಕ ಕಾರ್ಯದರ್ಶಿ ಎಸ್.ಪಿ.ಮಹಾಲಿಂಗೇಶ್ವರ, ದಲಿತ ಸಾಹಿತಿ ಡಾ.ಸಿದ್ದಲಿಂಗಯ್ಯ ಸೇರಿದಂತೆ ಪ್ರಮುಖರು ಪಾಲ್ಗೊಂಡಿದ್ದರು.



ನಗರದ ಸೆಂಟ್ರಲ್ ಕಾಲೇಜಿನಲ್ಲಿ ವಿಶ್ವಕಾವ್ಯ ದಿನದ ಅಂಗವಾಗಿ ಇಂದು ನಡೆದ ಪೃಥ್ವಿ ಕಾವ್ಯ ಉತ್ಸವ ಕಾರ್ಯಕ್ರಮದಲ್ಲಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ಚಂದ್ರಶೇಖರ ಕಂಬಾರ ಸೇರಿದಂತೆ, ರಾಜ್ಯದ ಹಲವಾರು ಸಾಹಿತಿಗಳು ಭಾಗವಹಿಸಿದ್ದರು.

Vijaya Karnataka - 22/03/19
page-no - II

# ದೇಶಿ ಸಾಹಿತ್ಯ ಪರಂಪರೆ ಸಂರಕ್ಷಣೆ ಅಗತ್ಯ

■ **ವಿಕ ಸುದ್ದಿಲೋಕ** ಬೆಂಗಳೂರು

ಐರೋಪ್ಯ ಸಾಹಿತ್ಯದ ಪ್ರಭಾವದಿಂದ ದೇಶಿ ಸಾಹಿತ್ಯ ಪರಂಪರೆ ನಾಶವಾಗಲು ಬಿಡಬಾರದು ಎಂದು ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಚಂದ್ರಶೇಖರ ಕಂಬಾರ ಹೇಳಿದರು.

ನಗರದ ಸೆಂಟ್ರಲ್ ಕಾಲೇಜಿನ ಆವರಣದಲ್ಲಿರುವ ಕೆನರಾ ಬ್ಯಾಂಕ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಸಭಾಂಗಣದಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ''ವಿಶ್ವ ಕಾವ್ಯ ದಿನ''ದ ಅಂಗವಾಗಿ ಗುರುವಾರ ಹಮ್ಮಿಕೊಂಡಿದ್ದ 'ಪೃಥ್ವಿ: ಕಾವ್ಯೋತ್ಸವ'ದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

''ವಸಹಾತುಶಾಹಿ ಆಡಳಿತ, ಇಂಗ್ಲಿಷ್ ಶಿಕ್ಷಣದಿಂದಾಗಿ 20ನೇ ಶತಮಾನದಲ್ಲಿ ಭಾರತದಲ್ಲಿ ಹೊಸ ಸಾಹಿತ್ಯದ ಪ್ರಕಾರವೇ ಸೃಷ್ಟಿಯಾಯಿತು. ಭಾರತೀಯ ಕಾವ್ಯದ ಮೇಲೆ ಯೂರೋಪಿಯನ್ ಮಾಡರ್ನ್‌ನಿಸಂ ಮತ್ತು ರೊಮ್ಯಾಂಟಿಸಿಸಂ ಭಾರಿ ಪರಿಣಾಮ ಬೀರಿದೆ. ಕಾದಂಬರಿ ಮತ್ತು ಜೀವನಚರಿತ್ರೆಗಳು ಇದಕ್ಕೆ ಹೊರತಾಗಿಲ್ಲ. ಯೂರೋ-ಅಮೆರಿಕನ್ ಸಾಹಿತ್ಯದ ಪ್ರಭಾವ ನಮ್ಮ ಪ್ರಾದೇಶಿಕ ಭಾಷಾ ಸಾಹಿತ್ಯವನ್ನು ಸಹ ಬಿಟ್ಟಿಲ್ಲ'' ಎಂದರು.



'ಪೃಥ್ವಿ: ಕಾವ್ಯೋತ್ಸವ'ದಲ್ಲಿ ಅಕಾಡೆಮಿ ಅಧ್ಯಕ್ಷ ಡಾ.ಚಂದ್ರಶೇಖರ ಕಂಬಾರ, ಸೀತಾಂಶು ಯಶಸ್ಚಂದ್ರ ಮತ್ತಿತರರು ಭಾಗವಹಿಸಿದ್ದರು.

**ಡಾ.ಚಂದ್ರಶೇಖರ ಕಂಬಾರ ಅಭಿಮತ**

''ದೇಶಿ ಸಾಹಿತ್ಯ ಪ್ರಕಾರವು ಇಲ್ಲಿನ ಮಣ್ಣು, ಗುಡ್ಡ, ಬೆಟ್ಟ, ಪರಿಸರ, ಗಿಡ, ಮರ, ಪಶು, ಪಕ್ಷಿಗಳೊಂದಿಗೆ ಬೆರೆತಿದೆ. ಹಾಡಿನ ಮೂಲಕವೇ ಪುರಾಣ, ಜಾನಪದ ಹಾಗೂ ಕಥೆಗಳನ್ನು ಹೇಳಲಾಗುತ್ತಿತ್ತು. ನಾನು ಸಹ ಜಾನಪದ ಸಾಹಿತ್ಯದ ಪ್ರಭಾವದಿಂದ ನಾಟಕ, ಕಾವ್ಯ ಹಾಗೂ ಕಾದಂಬರಿಗಳನ್ನು ರಚಿಸಿದ್ದೇನೆ,'' ಎಂದು ತಿಳಿಸಿದರು.

**ವಿಶ್ವ ಕಾವ್ಯ ದಿನದ ಅಂಗವಾಗಿ ನಡೆದ 'ಪೃಥ್ವಿ: ಕಾವ್ಯೋತ್ಸವ'**

ಗುಜರಾತಿ ಕವಿ ಸೀತಾಂಶು ಯಶಸ್ಚಂದ್ರ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಸಾಹಿತ್ಯ ಅಕಾಡೆಮಿ ಕಾರ್ಯದರ್ಶಿ ಕೆ. ಶ್ರೀನಿವಾಸ ರಾವ್, ಪ್ರಾದೇಶಿಕ ಕಾರ್ಯದರ್ಶಿ ಮಹಾಲಿಂಗೇಶ್ವರ ಉಪಸ್ಥಿತರಿದ್ದರು. ಇಡೀ ದಿವಸ ನಡೆದ ನಾನಾ ಗೋಷ್ಠಿಗಳಲ್ಲಿ ಕವಿ ಡಾ. ಸಿದ್ದಲಿಂಗಯ್ಯ ಸೇರಿದಂತೆ ನಾನಾ ಭಾಷೆಗಳ ಕವಿಗಳು ಪಾಲ್ಗೊಂಡಿದ್ದರು.

Vartha bharathi - 22/03/19
Page No - 03

# ಭಾರತೀಯ ಭಾಷೆಯಲ್ಲಿಯೇ ಸಾಹಿತ್ಯ ರಚನೆಯಾಗಲಿ

## ಚಂದ್ರಶೇಖರ ಕಂಬಾರ



ಬೆಂಗಳೂರು, ಮಾ.21: ಭಾರತೀಯ ಭಾಷೆಗಳಲ್ಲಿಯೇ ಬಹುಪಾಲು ಸಾಹಿತ್ಯ ರಚನೆಯಾಗುವ ವಾತಾವರಣ ನಿರ್ಮಿಸಬೇಕು ಎಂದು ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚಂದ್ರಶೇಖರ ಕಂಬಾರ ಹೇಳಿದ್ದಾರೆ.

ಗುರುವಾರ ನಗರದ ಸೆಂಟ್ರಲ್ ಕಾಲೇಜಿನ ಕೆನರಾ ಬ್ಯಾಂಕ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಸಭಾಂಗಣದಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಏರ್ಪಡಿಸಿದ್ದ ವಿಶ್ವ ಕಾವ್ಯ ದಿನದ ಅಂಗವಾಗಿ 'ಪೃಥ್ವಿ ಕಾವ್ಯೋತ್ಸವ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಭಾರತೀಯ ಭಾಷೆಗಳಲ್ಲಿ ಬಹುಪಾಲು ಸಾಹಿತ್ಯ ರಚನೆಯಾಗಬೇಕು. ಪಾಶ್ಚಿಮಾತ್ಯದ ಚಿಂತನೆಯಲ್ಲಿ ಮುಳುಗುವುದು ಸರಿಯಲ್ಲ. ನೆಲ ಸಂವೇದನೆ ಕಾಪಾಡಿಕೊಂಡು ಪಾಶ್ಚಿಮಾತ್ಯಕ್ಕೆ ಪರ್ಯಾಯ ಸಾಹಿತ್ಯ ರಚಿಸುವಲ್ಲಿ ಯಶಸ್ವಿ ಕಾಣಬೇಕು ಎಂದರು.

ಗುಜರಾತಿ ಭಾಷೆಯ ಹಿರಿಯ ಕವಿ ಸೀತಾಂಶು ಯಶಸ್ಚಂದ್ರ ಮಾತನಾಡಿ, ಭೂಮಿ ಒಂದು ಭೋಗದ ವಸ್ತುವಲ್ಲ. ಅದಕ್ಕೆ ತನ್ನದೇ ಆದ ಅಸ್ತಿತ್ವವಿದೆ. ತಾಯಿ ಮತ್ತು ಮಾತೃ ಭೂಮಿ ಸ್ವರ್ಗಕ್ಕೆ ಸಮಾನವಾದದ್ದು ಎಂದರು.

ರಾಜರ ಆಳ್ವಿಕೆಯಲ್ಲಿ ಭೂಮಿಯನ್ನು ಒಂದು ಭೋಗದ ವಸ್ತುವಿನ ರೀತಿಯಲ್ಲಿ ನೋಡಲಾಗುತ್ತಿತ್ತು. ಭೂಪತಿ, ಭೂಮಿಯ ಒಡೆಯ ಎಂದು ಅಹಂಕಾರದಿಂದ ಜಂಭಪಟ್ಟುಕೊಳ್ಳುತ್ತಿದ್ದ ರಾಜರನ್ನು ವಿಮರ್ಶಕರು ತಾಯಿಗಂಡರು ಎಂಬ ಕಾರವಾದ ಪದ ಬಳಕೆಯಿಂದ ಕರೆದಿದ್ದಾರೆ ಎಂದು ನುಡಿದರು.

ರಾಜರ ಪ್ರಭುತ್ವ ಕೊನೆಗೊಳ್ಳುತ್ತಿದ್ದಂತೆ ಭೂಮಿ ಎಂಬ ಪದಕ್ಕೆ ವಿಶಾಲವಾದ ಅರ್ಥ ಬಂದಿತು. ರೈತನನ್ನು ಭೂಮಿ ತಾಯಿಯ ಚೊಚ್ಚಲ ಮಗ, ಮಣ್ಣಿನ ಮಗ ಎಂದೆಲ್ಲ ಕರೆಯಲಾಯಿತು. ಭೂಮಿಯನ್ನು ಪೂಜನೀಯ ಭಾವನೆಯಿಂದ ಕಾಣಲಾಯಿತು. ಜನಪದ ಸಾಹಿತ್ಯದಲ್ಲೂ ಭೂಮಿ ತಾಯಿಯೇ ಮೂಲ ದೇವತೆ ಎಂದು ಹೇಳಿದರು.

ತಾಯಿ ಎಂದರೆ ಮಹತ್ವವಾದ ಸಂಬಂಧ, ಅಮ್ಮ ಎನ್ನುವ ಪದಕ್ಕೆ ಎಲ್ಲಾ ಭಾಷಾ ಸಾಹಿತ್ಯದಲ್ಲೂ ಗಂಭೀರವಾದ ಚಿಂತನೆ ನಡೆಸಲಾಗಿದೆ. ಹಲವು ಕಾವ್ಯಗಳಲ್ಲಿ ತಾಯಿಯನ್ನು ಕಂಡುಕೊಂಡಿದ್ದಾರೆ, ಮೊದಲನೆಯವರಾಗಿ ಭೂಮಿ ತಾಯಿ, ವಿಶ್ವಮಾತೆ, ಭಾರತ ಮಾತೆ, ಮಾತೃಭಾಷೆ ಹಾಗೂ ಜನ್ಮ ನೀಡಿದ ತಾಯಿ ಎಂಬ ವಿಶಾಲವಾದ ಅರ್ಥ ನೀಡಿದ್ದಾರೆ ಎಂದು ಅಭಿಪ್ರಾಯಿಸಿದರು.

ಕಾವ್ಯೋತ್ಸವದಲ್ಲಿ ಸಾಹಿತ್ಯ ಅಕಾಡೆಮಿ ಕಾರ್ಯದರ್ಶಿ ಕೆ.ಶ್ರೀನಿವಾಸರಾವ್, ಪ್ರಾದೇಶಿಕ ಕಾರ್ಯದರ್ಶಿ ಎಸ್.ಪಿ.ಮಹಾಲಿಂಗೇಶ್ವರ ಭಟ್, ಹಿರಿಯ ಸಾಹಿತಿ ಡಾ.ಸಿದ್ದಲಿಂಗಯ್ಯ ಸೇರಿದಂತೆ ಪ್ರಮುಖರು ಪಾಲ್ಗೊಂಡಿದ್ದರು.